ಕರ್ನಾಟಕ ಸರ್ಕಾರ
ಮೀನುಗಾರಿಕೆ ನಿರ್ದೇಶನಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001
ದೂ : 080 - 2286 4681/4604 ಫ್ಯಾಕ್ಸ್ : 080 - 2286 4619 ಇಮೇಲ್ : dof-blr-ka@nic.in

ಸಂಖ್ಯೆ: DOF-TECH0ALL2/107/2021, E-526456.

ದಿನಾಂಕ: 15 /07/2020

## ಸುತ್ತೋಲೆ

ವಿಷಯ: ಮೀನುಗಾರಿಕೆ ಇಲಾಖಾ ವ್ಯಾಪ್ತಿಯ ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು 2021-22ನೇ ಸಾಲಿನಿಂದ ವಿಲೇವಾರಿ ಮಾಡುವ ಕುರಿತು.

ಉಲ್ಲೇಖ: ಮೀನಿ/81/ಹಗುಪ(2)/2021, ಇ-502845, ದಿನಾಂಕ:29/06/2020 ಮತ್ತು 30/06/2021.

*************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ, 2021-22ನೇ ಸಾಲಿನ ಮೀನುಗಾರಿಕೆ ಫಸಲಿ ವರ್ಷದ ನವೀಕರಣದ ದಿನಾಂಕವನ್ನು 15-07-2021ವರೆಗೆ ವಿಸ್ತರಿಸಲಾಗಿತ್ತು. ದಿನಾಂಕ:15/07/2021ರ ಅಂತ್ಯಕ್ಕೆ ಗುತ್ತಿಗೆ/ಬಿಡ್ ಮೊತ್ತ ಪಾವತಿಸಿ ನವೀಕರಿಸಿ ಕೊಳ್ಳದ ಹಾಗೂ ಬಾಕಿ ಇರುವ ಇಲಾಖಾ ವ್ಯಾಪ್ತಿಯ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು 2021-22ನೇ ಸಾಲಿನಿಂದ ಅನ್ವಯವಾಗುವಂತೆ ಒಳನಾಡು ಜಲಸಂಪನ್ಮೂಲಗಳ ಗುತ್ತಿಗೆ ಕಾರ್ಯನೀತಿ-2014 ರಂತೆ ಪರಿಷ್ಕೃತ ವೇಳಾಪಟ್ಟಿಯಂತೆ ವಿಲೇಗೊಳಿಸಲು ಸೂಚಿಸಲಾಗಿದೆ (ಪರಿಷ್ಕೃತ ವೇಳಾಪಟ್ಟಿ 2021-22ನೇ ಸಾಲಿಗೆ ಮಾತ್ರ ಅನ್ವಯವಾಗುತ್ತದೆ).

ಅಡಕ: ಪರಿಷ್ಕೃತ ವೇಳಾಪಟ್ಟಿ

ಮೀನುಗಾರಿಕೆ ನಿರ್ದೇಶಕರು

ಗೆ.
ಎಲ್ಲಾ ಮೀನುಗಾರಿಕೆ ಹಿರಿಯ ಉಪ ನಿರ್ದೇಶಕರು
ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ
ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ
ಪ್ರತಿಯನ್ನು: ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು,) ಜಲಾಶಯ ಉಸ್ತುವಾರಿ ಅಧಿಕಾರಿಗಳು
ಪ್ರತಿಯನ್ನು: ಕೇಂದ್ರ ಕಛೇರಿಯ ಹಗುಪ(1) ಮತ್ತು (2)ಸಂಗ್ರಹ ಕಡತಕ್ಕೆ.

<u>ಅನುಬಂಧ</u>

ಇಲಾಖಾ ವ್ಯಾಪ್ತಿಯ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು 2021-22ನೇ ಸಾಲಿನಿಂದ ಅನ್ವಯವಾಗುವಂತೆ ಒಳನಾಡು ಜಲಸಂಪನ್ಮೂಲಗಳ ಗುತ್ತಿಗೆ ಕಾರ್ಯನೀತಿ-2014 ರಂತೆ ವಿಲೇವಾರಿ ಮಾಡಲು ಪರಿಷ್ಕೃತ ವೇಳಾಪಟ್ಟಿ (ಪರಿಷ್ಕೃತ ವೇಳಾಪಟ್ಟಿ ಪ್ರಸಕ್ತ ಸಾಲಿಗೆ ಮಾತ್ರ ಅನ್ವಯ)

| ಕ್ರಮ ಸಂಖ್ಯೆ. | ಮೀನು ಪಾಶುವಾರು ಹಕ್ಕಿನ ವಿಲೇ ಪ್ರಕ್ರಿಯೆ | ಪ್ರಾರಂಭದ ದಿನಾಂಕ | ಮುಕ್ತಾಯಗೊಳಿಸಬೇಕಾದ ಅಂತಿಮ ದಿನಾಂಕ |
|---|---|---|---|
| 1. | ಅ) 2020-21ನೇ ಸಾಲಿಗೆ ಅರ್ಹವಿರುವ ಇಲಾಖಾ ವ್ಯಾಪ್ತಿಯ ಜಲಸಂಪನ್ಮೂಲಗಳ ನವೀಕರಣ | -- | 15-07-2021 |
| | ಆ) ಅರ್ಹ ಮೀನುಗಾರರ ಸಹಕಾರ ಸಂಘಗಳಿಂದ ಅರ್ಜಿ ಆಹ್ವಾನಿಸಿ ನಿಗದಿತ ನಮೂನೆಯಲ್ಲಿ ಪ್ರಕಟಣೆ ಹೊರಡಿಸುವುದು. | 16-07-2021 | 20-07-2021 |
| | ಇ) ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ | -- | 31-07-2021 |
| | ಈ) ಪೂರ್ಣ ಮಾಹಿತಿಗಳೊಂದಿಗೆ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು ಕಾರ್ಯನೀತಿ ಅನುಬಂಧ-18 ರಂತೆ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ಕೊನೆಯ ದಿನಾಂಕ | -- | 07-08-2021 |
| 2. | ಕಂಡಿಕೆ 01 ರಂತೆ ನೇರಗುತ್ತಿಗೆ ಮೂಲಕ ವಿಲೇಯಾಗದ ಬಾಕಿ ಜಲಸಂಪನ್ಮೂಲಗಳ ಪ್ರಥಮ (1ನೇ) ಸುತ್ತಿನ ಟೆಂಡರ್ ಕಂ ಹರಾಜು ಮೂಲಕ ವಿಲೇ | 10-08-2021 | 31-08-2021 |
| 3. | ಕಂಡಿಕೆ 02 ರಂತೆ ಟೆಂಡರ್ ಕಂ ಹರಾಜು ಮೂಲಕ ವಿಲೇಯಾಗದ ಬಾಕಿ ಜಲಸಂಪನ್ಮೂಲಗಳ ದ್ವಿತೀಯ (2ನೇ ) ಸುತ್ತಿನ ಟೆಂಡರ್ ಕಂ ಹರಾಜು ಮೂಲಕ ವಿಲೇ | 13-09-2021 | 30-09-2021 |
| 4. | ಕಂಡಿಕೆ 03 ರಂತೆ ಟೆಂಡರ್ ಕಂ ಹರಾಜು ಮೂಲಕ ವಿಲೇಯಾಗದ ಬಾಕಿ ಜಲಸಂಪನ್ಮೂಲಗಳ ತೃತೀಯ (3ನೇ) ಸುತ್ತಿನ ಟೆಂಡರ್ ಕಂ ಹರಾಜು ಮೂಲಕ | 12-10-2021 | 30-10-2021 |

| | | | |
|---|---|---|---|
| | ವಿಲೇ | | |
| 5. | ಮೇಲ್ಕಂಡ ಕಂಡಿಕೆ 01 ರಿಂದ 04ರವರೆಗೆ ಯಾವ ಪ್ರಕ್ರಿಯೆಯಲ್ಲಿಯೂ ವಿಲೇ ಆಗದ ಜಲಸಂಪನ್ಮೂಲಗಳ ವಿಲೇ ವಿನಾಯ್ತಿ ಪಡೆಯುವ ಅವಧಿ | 01-12-2021 | 31-12-2021 |
| 6. | ಜಲಾಶಯಗಳ ಮೀನು ಪಾಶವಾರು ಹಕ್ಕಿನ ವಿಲೇ ಮಾಡುವ ಕುರಿತು. | ಸರ್ಕಾರ ಆದೇಶ ಸಂಖ್ಯೆ.ಪಸಂಮೀ 125 ಮೀಇಇ 2013, ಬೆಂಗಳೂರು, ದಿನಾಂಕ:21-02-2014ರ ಅನ್ವಯ ವಿಲೇಗೊಳಿಸುವುದು ಹಾಗೂ ಯಾವುದೇ ಬದಲಾವಣೆ ಇರುವುದಿಲ್ಲ. | |

ಮೀನುಗಾರಿಕೆ ನಿರ್ದೇಶಕರು
ಬೆಂಗಳೂರು